ಹೊರನಾಡ ಚಿಲುಮೆ
ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ
ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries
ಸಂಪುಟ ೫, ಸಂಚಿಕೆ ೧, ಜೂನ್ ೨೦೧೭

ಕನ್ನಡವೇ ಪಂಚಪ್ರಾಣವಾಗಲಿ

ಹೊರನಾಡ ಚಿಲುಮೆಯ

ಐದನೆಯ ವರುಷ

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಸಿಡ್ನಿ ಸುದ್ದಿಗಳು ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೬
ರಾಂ ರಾಮ ... ಪು. ೮

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೦
ಕಾವ್ಯ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ಪದಪುಂಜ ... ಪು. ೧೨

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೬

ಸಿಡ್ನಿ ಸುದ್ದಿಗಳು
ಪುಟ ೨-೫

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಈ ಸಂಚಿಕೆಯೊಂದಿಗೆ ಹೊರನಾಡ ಚಿಲುಮೆಯೆಂಬ ಅಂತರ್ಜಾಲ ಮಾಸ ಪತ್ರಿಕೆಯು ತನ್ನ ಐದನೇ ವರ್ಷದ ಮೊದಲ ಹೆಜ್ಜೆಯನ್ನಿಡುತ್ತಿದೆ. ಒಮ್ಮೆ ಹಿಂದಿರುಗಿ ನೋಡಿದರೆ, ಅಬ್ಬಾ! ಆಗಲೇ ಐದನೆಯ ವರ್ಷಕ್ಕೆ ಕಾಲಿಟ್ಟೆವೇ ಎಂದೆನಿಸಿ ಆನಂದ ಉಂಟಾಗುತ್ತದೆ. ಇದು ನಮಗೆ ನಾವೇ ಬೆನ್ನು ತಟ್ಟಿಕೊಳ್ಳುತ್ತಿದ್ದೇವೆ ಎಂದೆನಿಸುವುದಿಲ್ಲ. ಬದಲಾಗಿ, ಎಂದೂ ಬೋರಲಾಗದ ಮಗುವು ಬೋರಲು ಹಾಕಿದಾಗ ಪಡುವ ಸಂತೋಷದಂತಷ್ಟೇ.

ಈ ನಾಲ್ಕು ವರ್ಷದಿಂದ ನಮ್ಮ ಜೊತೆಗಿದ್ದು ಸಹಕರಿಸಿದ ಎಲ್ಲರಿಗೂ ಹೃದಯಾಂತರಾಳದ ಧನ್ಯವಾದಗಳು. ತಮ್ಮ ಅಮೂಲ್ಯ ಲೇಖನಗಳನ್ನು ಕೊಟ್ಟಿರುವ ಲೇಖಕರಿಗೆ, ಅಷ್ಟೇ ಆತ್ಮೀಯತೆಯಿಂದ ಓದಿ, ಅನಿಸಿಕೆಗಳನ್ನು ಹಂಚಿಕೊಂಡಿರುವ ಓದುಗರಿಗೆ ನಮನಗಳು. ನೀವುಗಳೇ ಹೊರನಾಡ ಚಿಲುಮೆಯ ಪ್ರಾಣದುಸಿರು. ನಿಮ್ಮಯ ಆ ಸ್ಪಂದನೆಯೇ ಹೊರನಾಡ ಚಿಲುಮೆಯ ನಾಡೀಬಡಿತವೆಂದರೆ ಅತಿಶಯೋಕ್ತಿಯಾಗಲಾರದು.

ಬಹಳಷ್ಟು ಬಾರಿ, "ನಮ್ಮಿಂದ ಎಂತಹ ಬದಲಾವಣೆ ತರಲು ಸಾಧ್ಯ, ನಾವೇನು ಅಷ್ಟು ಪ್ರಮುಖರೆ, ಪ್ರಖ್ಯಾತರೆ, ಅಧಿಕಾರಸ್ಥರೆ" ಎಂದು ಪ್ರಶ್ನಿಸಿಕೊಳ್ಳುತ್ತೇವೆ. ಹೀಗಾಗಿ ಬದಲಾವಣೆ ಮಾಡುವುದಕ್ಕೆ ಒಂದು ಸ್ಥಾನ ಬೇಕು ಎಂದು ನಿರ್ಧರಿಸಿಬಿಡುತ್ತೇವೆ. ಭಾಷೆಯನ್ನು ಉಪಯೋಗಿಸುವ ಬಗ್ಗೆಯೂ ಈ ನೀತಿಯನ್ನು ಅನುಸರಿಸುತ್ತೇವೆ. ನಾನು ಕನ್ನಡವನ್ನು ಬಳಸಿದರೆ ನನ್ನ ಸುತ್ತಮುತ್ತಲೂ ಕನ್ನಡವು ಬೆಳೆಯುತ್ತದೆ ಎಂಬುದನ್ನು ಮರೆತುಬಿಡುತ್ತೇವೆ. ಮತ್ತೆ ನಮ್ಮ ಭಾಷೆಯು ನಮಗೆ ಜ್ಞಾಪಕ ಬರುವುದು ನಮ್ಮ ನಾಡಿನಲ್ಲೇ ಕನ್ನಡವು ಮರೆಯಾಯಿತೆಂಬ ಕೂಗು ಎದ್ದಾಗ. ಅದಕ್ಕೆ ನಾವೆಷ್ಟು ಕಾರಣರು ಎಂಬುದನ್ನು ಒಮ್ಮೆಯೂ ಯೋಚಿಸದೆ ಇತರ ಭಾಷೆಯ ಹೇರಿಕೆಯಾಗುತ್ತಿದೆ ಎಂದು ಬೊಬ್ಬಿಡುತ್ತೇವೆ.

ಹೊರನಾಡ ಚಿಲುಮೆಯ ವೇದಿಕೆಯ ಮೂಲಕ ಹಲವಾರು ಬಾರಿ ನಮ್ಮ ನುಡಿಯಾದ ಕನ್ನಡವನ್ನು ಹೆಚ್ಚು ಹೆಚ್ಚು ಬಳಸಿರೆಂದು ವಿನಂತಿಸಿದ್ದೇವೆ. ಚಿನ್ನದ ನುಡಿಯಾದ ಕನ್ನಡವನ್ನು ನಮ್ಮ ದೇಹಕ್ಕೆ ಪುಷ್ಟಿ ಕೊಡುವ ಅನ್ನದಂತೆ ಬಳಸಿದಾಗ ಮಾತ್ರ ಕನ್ನಡವು ನಮ್ಮ ಪ್ರಾಣವಾಗುತ್ತದೆ. ಈ ನಿಟ್ಟಿನಲ್ಲಿ ನಾವು ನೀವುಗಳೆಲ್ಲ, ಆದ್ಯತೆಯ ಮೇಲೆ ಕನ್ನಡವನ್ನು ಎಲ್ಲೆಡೆಯೂ ಉಪಯೋಗಿಸಬೇಕು. ವಿಶೇಷವಾಗಿ ಈಗಿನ ಕಾಲದಲ್ಲಿ ನಿತ್ಯಬಳಕೆಯಲ್ಲಿರುವ ವಿದ್ಯುನ್ಮಾನ ಮಾಧ್ಯಮದಲ್ಲಿ (ಫೇಸ್ಬುಕ್, ವಾಟ್ಸ್ಯಪ್, ಇಮೇಲ್ ಇತ್ಯಾದಿ).

ಆಗ ನಾವಾಡುವ ನುಡಿಯ ಬಗೆಗಿನ ಹೆಮ್ಮೆಯು, ಅಭಿಮಾನವಾಗಿ ಏರ್ಪಟ್ಟು, ನಮ್ಮ ಪ್ರಾಣದುಸಿರಿನಂತೆ ಆಗುತ್ತದೆ. ಆಗ ಯಾವುದೂ ಹೇರಿಕೆಯೆನಿಸುವುದಿಲ್ಲ. ಅದುವೇ ಸಹಜ ಸ್ಥಿತಿಯಾಗುತ್ತದೆ. ಅಂತಹ ಒಂದು ಸುಮಧುರ ಸ್ಥಿತಿಯನ್ನು ತರುವುದಕ್ಕಾಗಿ ನಮ್ಮ ನಮ್ಮಲ್ಲಿ ಕನ್ನಡವನ್ನು ದಿನನಿತ್ಯವೂ ಉಪಯೋಗಿಸೋಣ. ಕನ್ನಡವನ್ನೇ ನಮ್ಮ ಪ್ರಾಣದುಸಿರಾಗಿಸಿಕೊಳ್ಳೋಣ. ▪

ಎರಡು ತಿಂಗಳ ಪ್ರಮುಖ ದಿನಗಳು

ಜೂನ್ ಶ್ರೀ ಹೇವಿಳಂಬಿ ನಾಮ ಸಂವತ್ಸರ,
ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ/ಆಶಾಢ ಮಾಸ

05 ಸೋ - ನಿರ್ಮಲಾ ಏಕಾದಶಿ,
08/09 - ಹುಣ್ಣಿಮೆ
13 ಮಂ - ಸಂಕಷ್ಟ ಚತುರ್ಥಿ,
20 ಮಂ - ಏಕಾದಶಿ
23 ಶು - ಷಬ್-ಎ-ಬರಾತ್
24 ಶ - ಮಣ್ಣೆತ್ತಿನ ಅಮಾವಾಸ್ಯೆ
26 ಸೋ - ಕುತುಬ್ ಏ ರಂಜಾನ್

ಜುಲೈ ಶ್ರೀ ಹೇವಿಳಂಬಿ ನಾಮ ಸಂವತ್ಸರ,
ಉತ್ತರಾಯಣ/ದಕ್ಷಿಣಾಯನ, ಗ್ರೀಷ್ಮ/ವರ್ಷ ಋತು,
ಆಶಾಢ/ಶ್ರಾವಣ ಮಾಸ

04 ಮಂ - ದೇವಕಯನೀ ಏಕಾದಶಿ
09 ಭಾ - ವ್ಯಾಸ ಹುಣ್ಣಿಮೆ, 12 ಬು - ಸಂಕಷ್ಟ ಚತುರ್ಥಿ
15 ಶ - ಬಾಲ ಗಂಗಾಧರ ತಿಲಕ್ ಜನ್ಮ ದಿನ
19 ಬು - ಕಾಮಿಕಾ ಏಕಾದಶಿ, 23 ಭಾ - ಭೀಮನ ಅಮಾವಾಸ್ಯೆ
24 ಸೋ - ಶ್ರಾವಣ ಮಾಸಾರಂಭ
25 ಮಂ - ಮಂಗಳ ಗೌರೀ ವ್ರತ
28 ಶು - ನಾಗ ಗರುಡ ಪಂಚಮಿ

ಕಳೆದ ಮೇ ತಿಂಗಳ ೧೩ ನೇ ತಾರೀಖಿನಂದು ಸಿಡ್ನಿಯಲ್ಲಿ ಶಂಕರಸೇವಾ ಸಮಿತಿ ಅವರ ಆಶ್ರಯದಲ್ಲಿ ಆದಿ ಗುರು ಶಂಕರಾಚಾರ್ಯರ ಜಯಂತಿಯನ್ನು ಬಹಳ ಸೊಗಸಾಗಿ ಆಯೋಜಿಸಲಾಗಿತ್ತು. ಹಿಂದೂ ಧರ್ಮವನ್ನು ಅವನತಿಯ ಗತಿಯಿಂದ ಹೊರಗೆಳೆದು ಎತ್ತರಕ್ಕೆ ಬೆಳಸಿದ, ಭಾರತದ ನಾಲ್ಕು ದಿಕ್ಕುಗಳಲ್ಲಿ ಸಂಚರಿಸಿ ದ್ವೈತ ಮತ ಸಿದ್ಧಾಂತವನ್ನು ಪ್ರಚಾರ ಮಾಡುತ್ತಾ ಶಿಷ್ಯವೃಂದವನ್ನು ಬೆಳಸಿ ಅನುಯಾಯಿಗಳನ್ನು ಸೃಷ್ಟಿಸಿ ಹಿಂದೂ ಧರ್ಮದ ಏಳಿಗೆಗೆ ದುಡಿದು ಸಣ್ಣ ವಯಸ್ಸಿನಲ್ಲೇ ಕೈಲಾಸ ವಶರಾದ ಶ್ರೀ ಶಂಕರಾಚಾರ್ಯರ ಜಯಂತಿ ಮತ್ತು ಅವರ ತ್ಯಾಗ,ಸೇವೆಗಳನ್ನು ಸ್ಮರಿಸುವ ಕೆಲಸ ಎಲ್ಲ ಹಿಂದೂಗಳಿಗೂ ಅಗತ್ಯ. ಅಂದು ಶಂಕರರು ಹಿಂದೂ ಧರ್ಮ ಪ್ರಚಾರದ ಮಹತ್ಕಾರ್ಯವನ್ನು ಮಾಡದಿದ್ದರೆ ನಾವುಗಳು ಇಂದು ಯಾವ ಧರ್ಮವನ್ನು ಆಚರಿಸುತ್ತಾ ಇರಬೇಕಿತ್ತೋ ಎನ್ನುವ ವಿಚಾರ ನೆನೆದರೆ ಒಮ್ಮೆ ಆತಂಕದಿಂದ ಹುಬ್ಬೇರಿಸುವಂತಾಗುತ್ತದೆ. ದೂರದ ದೇಶದಲ್ಲಿ ಬಂದು ಶಂಕರ ಜಯಂತಿಯನ್ನು ಮಾಡುವ ಸಂಕಲ್ಪ ಮಾಡಿ ನಾಲ್ಕಾರು ಆಸಕ್ತ ಉತ್ಸಾಹಿಗಳು ಗುಂಪು ಸೇರಿಸಿ "ಶ್ರೀ ಶಂಕರ ಸೇವಾ ಸಮಿತಿ ಸಿಡ್ನಿ " ಎನ್ನುವ ನಾಮಕರಣ ಮಾಡಿಕೊಂಡು ಮಿಂಟೋ ಶಿವಮಂದಿರದ ಆವರಣದಲ್ಲಿ ಶನಿವಾರದ ದಿನವಾದ ಅಂದು ಬೆಳಿಗ್ಗೆ ಹತ್ತೂ ವರೆಗೆ ಸೇವಕರು ಭಕ್ತಾದಿಗಳು ನೆರೆದರು. ಪುರೋಹಿತರಾದ ಶ್ರೀಯುತ ಅರುಣ್ ಶರ್ಮಾ ಅವರ ನೇತೃತ್ವದಲ್ಲಿ ಶ್ರೀಮತಿ ಮತ್ತು ಶ್ರೀ ಲಕ್ಷ್ಮಿ ಸೋಮಶೇಖರ್ ಪೂಜಾ ಸಂಕಲ್ಪ ಮಾಡಿದರು. ಗಣಪತಿ ಪೂಜೆ, ಶಿವಲಿಂಗಕ್ಕೆ ಅಭಿಷೇಖ, ಶ್ರೀ ರುದ್ರ ನಮಕ-ಚಮಕಗಳೊಂದಿಗೆ ಹತ್ತಾರು ಬ್ರಾಹ್ಮಣ ಯುವಕರು ಕಂಠಸೇರಿಸಿ ಪಠಿಸಿದ್ದು ಸಮೂಹ ಘೋಷ ಕೇಳುಗರ ಅಂತರಂಗದಲ್ಲಿ ತರಂಗ ಮೂಡಿಸಿತು. ಸಮಿತಿಯ ಸದಸ್ಯರು, ಮಕ್ಕಳು ಅಭಿಷೇಖ ಮಾಡುವುದರಲ್ಲಿ ಭಾಗಿಯಾದರು. ಮಡಿ ಮೈಲಿಗೆ ಎನ್ನುವ ಕಟ್ಟುಪಾಡಿಲ್ಲದೆ ಮುಕ್ತ ಅವಕಾಶ ಎಲ್ಲರಿಗು ನೀಡಲಾಗಿತ್ತು.

ಇದರ ನಂತರ ಕನಕಧಾರಾ ಸ್ತೋತ್ರ,ಶಾರದಾ ಭುಜಂಗ ಸ್ತೋತ್ರ, ಭಜಗೋವಿಂದಂ, ನೆರೆದಿದ್ದವರೆಲ್ಲರಿಗೂ ಶ್ಲೋಕಗಳ ಸಮೂಹ ಗಾಯನ ಮಾಡಲು ಕನ್ನಡ ಹಾಗೂ ಇಂಗ್ಲಿಷಿನಲ್ಲಿ ಪ್ರತಿಗಳನ್ನೂ ಹಂಚಲಾಕಿತ್ತು. ಇದು ಬಹಳ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು.
ಕುಮಾರಿ ಆಜ್ಞಾ ಶಿವ ಪಂಚಾಕ್ಷರಿ ಶ್ಲೋಕ ಹಾಡಿದರೆ, ಚಿ ಪ್ರಣವ್ ಜಯರಾಮ್,ಕು ನಿರೀಕ್ಷ ಭಟ್, ಕು ಸಿಂಧು ನಾರಾಯಣ ಶಿವಾಷ್ಟಕವನ್ನು ಸಂಗೀತ ಬದ್ಧವಾಗಿ ಹಾಡಿದರು. ಜೊತೆಗೆ ಚಿ ಪ್ರಣವ್ ಅಳವಂಡಿ ತಬಲಾ ವಾದ್ಯ ಹಾಡಿಗೆ ಮೆರಗು ನೀಡಿತು.
ಶೃಂಗೇರಿಯ ಸಮೀಪದ ಹರಿಹರಪುರದ ಸ್ವಾಮಿಗಳ ಹಿತನುಡಿಗಳ ತುಣುಕು ವಿಡಿಯೋ ಮೂಲಕ ಪರದೆಯ ಮೇಲೆ ಎಲ್ಲರಿಗೂ ನೋಡಿ ಆನಂದವಾಯಿತು.ಅವರ ಹಿತವಚನಗಳು ಚಿತ್ತದಲ್ಲಿ ಆಧ್ಯಾತ್ಮದ ಚಿಂತನೆ ಮೂಡಿಸಿತು. ಭಾಷಣದ ಕಡೆಯಲ್ಲಿ ಅವರು ಸಮಿತಿಯವರಿಗೆ ಶುಭವನ್ನು ಕೋರಿದರು.

ಎಂದಿನಂತೆ ಎಲ್ಲ ಕಾರ್ಯಕ್ರಮದ ಬಳಿಕ ಮಹಾಪ್ರಸಾದ ಏರ್ಪಡಿಸಲಾಗಿತ್ತು. ರುಚಿಕರ ಅಡುಗೆ ಬಿಸಿಬೇಳೆಭಾತ್,ಮೊಸರನ್ನ,ಲಾಡು ಊಟ ಎಲ್ಲರಿಗೂ ದೇವಸ್ಥಾನದ ಆವರಣದಲ್ಲೇ ಬಡಿಸಲಾಗಿತ್ತು.
ಈ ರೀತಿಯ ಧಾರ್ಮಿಕ ಕಾರ್ಯಕ್ರಮಗಳು ಮತ್ತು ಇಂತಹ ಸಂತರ ನೆನೆಯುವ ಕೆಲಸ ಮುಂದಿನ ಪೀಳಿಗೆಗೆ ಅತಿ ಅಗತ್ಯವಿದೆ.ಇಂತಹ ಒಂದು ಕಾರ್ಯಕ್ರಮ ಆಯೋಜಿಸಿದ ಹಾಗೂ ವೇದ,ದೇವರ ಪೂಜೆ, ಸಂಪ್ರದಾಯಗಳನ್ನೂ ಉಳಿಸಿ ಬೆಳೆಸುವ ಧ್ಯೇಯಗಳನ್ನು ಹೊತ್ತಿರುವ ಶಂಕರ ಸೇವಾ ಸಮಿತಿಗೆ ಅಭಿನಂದನೆಗಳು.

ಮುಂದಿನ ಪುಟ ನೋಡಿ ...

ಸಿಡ್ನಿ ಶ್ರೀ ಶಂಕರ ಸೇವಾ ಸಮಿತಿಯ ಆಶ್ರಯದಲ್ಲಿ ಮಿಂಟೋ ಎಂಬಲ್ಲಿರುವ ಶಿವ ಮಂದಿರದಲ್ಲಿ ಜರುಗಿದ ಶಂಕರ ಜಯಂತಿಯ ಛಾಯಾ ಚಿತ್ರಗಳು

ಕುರಿತೋದುವ ಹೊತ್ತು ಎಂಬ ಶೀರ್ಷಿಕೆ ನೋಡಿದಾಗ ಏನಪ್ಪಾ ಇದು ಹೊಸಾ ತರ ಇದೆ, "ಕುರಿತೋದರಿಯದೆಯುಂ ಕಾವ್ಯ ಪ್ರಯೋಗ ಪರಿಣಿತಮತಿಗಳ್ " ಎಂಬ ಉಕ್ತಿಗೂ ಈ ಕಾರ್ಯಕ್ರಮಕ್ಕೂ ಏನಾದರೂ ಕೊಂಡಿ ಇರಬಹುದೇ ಎನ್ನಿಸಿತು. ಅದರಲ್ಲೂ ನಾಲ್ವರು ಕಥೆಗಾರರಿಂದ ತಮ್ಮ ಕಥೆಗಳ ಪ್ರಸ್ತುತಿ ಎಂದಾಗ ಕುತೂಹಲ ಮತ್ತಷ್ಟು ಹೆಚ್ಚಾಗಿ ಜೂನ್ 4 ಭಾನುವಾರ ಸಂಜೆ ಇದ್ದ ಕಾರ್ಯಕ್ರಮಕ್ಕೆ ಹೋದೆ. ಸಾಹಿತ್ಯಾಸಕ್ತರು ಸಾಕಷ್ಟು ಸಂಖ್ಯೆಯಲ್ಲೇ ನೆರೆದಿದ್ದರು. ಅನಿವಾಸಿ ಕಲಾ ತಂಡದ ಶ್ರೀಮತಿ ವೀಣಾ, ನೆರೆದಿದ್ದವರೆಲ್ಲರಿಗೂ ಉಪ್ಪಿಟ್ಟು ಕೇಸರೀಬಾತ್ ಮತ್ತು ಕಾಫಿ ಕೊಟ್ಟು ಉಪಚರಿಸಿ, ಸಡಗರದಿಂದ ಎಲ್ಲರನ್ನೂ ಕಾರ್ಯಕ್ರಮಕ್ಕೆ ಅಣಿಗೊಳಿಸಿದ್ದರು.

****

ದೀಪವಾರಿ ಕತ್ತಲಾದಾಗ ಎಲ್ಲರ ಗಮನ ವೇದಿಕೆಯ ಕಡೆಗೆ ಹರಿದಿತ್ತು. ಸಿಡ್ನಿಯ ಕನ್ನಡ ಸಾಹಿತ್ಯಲೋಕದಲ್ಲೇ ಪ್ರಥಮಬಾರಿಗೆ ಎನ್ನಬಹುದಾದಂತ ಹೊಸ ರೀತಿಯ ಪ್ರಯೋಗವದು. ಚಲನಚಿತ್ರ, ನಾಟಕ ಕ್ಷೇತ್ರಗಳಲ್ಲಿ ಸಾಕಷ್ಟೇ ಪಳಗಿರುವ ಅನಿವಾಸಿ ಕಲಾ ತಂಡದವರಿಗೂ ಒಂದು ಹೊಸ ಅನುಭವ. ಹೇಗಾಗುತ್ತದೋ ಎಂಬ ಆತಂಕ ಕಾರ್ಯಕ್ರಮದ ನಿಯೋಜಕರಿಗಾದರೆ, ಹೇಗಿರುತ್ತದೋ ಎಂಬ ಕುತೂಹಲ ಆಗಮಿಸಿದವರಿಗೆ.

ಕಥೆಗಳ ಸಂಜೆ ಎಂದು ಹೇಳಬಹುದೇನೋ ಎಂಬಂತೆ ಅಂದು ನಾಲ್ವರು ಕಥೆಗಾರರು, ತಮ್ಮ ಕಥೆಗಳನ್ನು ಪ್ರಸ್ತುತಿ ಪಡಿಸುವವರಿದ್ದರು. ಪ್ರತಿಯೊಂದು ಕಥೆಗೆ ಮುನ್ನ ಒಂದು ರಂಗಗೀತೆ, ಇದಕ್ಕೆ ಕಂಬಾರರ ಮತ್ತು ವರಕವಿ ಬೇಂದ್ರೆಯವರ ಗೀತೆಗಳನ್ನು ಆರಿಸಿಕೊಳ್ಳಲಾಗಿತ್ತು, ಮತ್ತು ಶ್ರೀ ಹರೀಶ್ ರವರಿಂದ ಕಥೆಗಾರರ ಕಿರು ಪರಿಚಯ.

ಮೊದಲ ಕಥೆ ಸಿಡ್ನಿ ಶ್ರೀನಿವಾಸ್ ರವರಿಂದ. ಸಿಡ್ನಿಯ ಕನ್ನಡಿಗರಿಗೆ ಸುಪರಿಚಿತರಾದ ಶ್ರೀನಿವಾಸ್ ಪ್ರಸ್ತುತ ಪಡಿಸಿದ ಕಥೆ ‘‘ವಿಳಾಸ’’. ಮನೆಯಿಂದ ತಪ್ಪಿಸಿಕೊಂಡು ಬಂದಂತ, ಮರೆವಿನ ತೊಂದರೆಯಿಂದ ಬಳಲುವ, ವೃದ್ಧ ವ್ಯಕ್ತಿಯ ಬಗ್ಗೆ ಕಾಳಜಿ ತೋರಿ, ಆತನಿಗೆ ಸಹಾಯ ನೀಡುತ್ತಾನೆ ಕಥಾನಾಯಕ. ನಂತರ ಕುತೂಹಲದಿಂದ ಆ ವ್ಯಕ್ತಿಯ ಹಿನ್ನೆಲೆ ಅರಿಯುವ ಸಲುವಾಗಿ, ಪೋಲೀಸರೊಡನೆ ಆ ವ್ಯಕ್ತಿಯನ್ನು ಬಿಡಲು, ಅವನ ಮನೆಯವರೆಗೂ ಹೋಗಿ, ಅವನ ಮಗಳನ್ನು ಭೇಟಿಯಾಗಿ, ವಿವರಗಳನ್ನು ಅರಿತುಕೊಳ್ಳುತ್ತಾನೆ.’’ ಅಂತ್ಯಕ್ಕೆ ತನ್ನನ್ನು ತಾನೇ ’ಎಲ್ಲಿಂದ ಬಂದಿದ್ದೇವೋ, ಎಲ್ಲಿಗೆ ಹೋಗುತ್ತೇವೋ, ನಮ್ಮ ನಿಜವಾದ ವಿಳಾಸ ಯಾವುದೋ,’ ಎಂದು ಕೇಳಿ ಕೊಳ್ಳುತ್ತಾ ಕಥೆಯನ್ನು ಮುಗಿಸುತ್ತಾನೆ ಕಥಾನಾಯಕ.

ಇದು ಶ್ರೀನಿವಾಸ್ ರವರು ಕಥೆ ಓದಿದರು ಎಂಬುದಕ್ಕಿಂತ, ಸ್ವಗತದಂತೆ ಇತ್ತು ಎನ್ನಬಹುದು. ನೇರ ನಿರೂಪಣೆ, ಸ್ಪಷ್ಟ ಉಚ್ಚಾರಣೆಯೊಂದಿಗೆ, ಮೊದಲಿನಿಂದ ಕೊನೆಯವರೆವಿಗೂ ಏನಾಗುವುದೋ ಎಂಬ ಕುತೂಹಲ ಉಳಿಸಿಕೊಂಡು, ಅಭಿಮಾನಿಗಳ ಮನಗೆದ್ದರು ಶ್ರೀ ಶ್ರೀನಿವಾಸ್.

ನಂತರ ಕನ್ನಡ ಸಮುದಾಯದಲ್ಲಿ, ತಮ್ಮ ಕವನ, ಕಥೆ, ನಾಟಕಗಳಿಂದ ಸಾಕಷ್ಟು ಹೆಸರಾಗಿರುವ ಶ್ರೀಮತಿ ಅನುಶಿವರಾಂ ರವರ ‘‘ತಿರುವು’’ ಕಥೆ. ಪ್ರೌಢ ವಯಸ್ಸಿನ, ಪತಿಯನ್ನು ಕಳೆದುಕೊಂಡ ಭಾರತೀಯ ಹೆಣ್ಣಿನ ಮಾನಸಿಕ ತೊಳಲಾಟದ ಕಥೆ. ಸಮಾಜದ, ಬಂಧುಬಾಂಧವರ ಅನುಕಂಪವೊಂದೇ ಸಾಲದು, ತನ್ನ ಒಂಟಿತನವನ್ನು ನೀಗಿಕೊಳ್ಳಲು, ತನ್ನ ಮನಸ್ಸನ್ನು ಹಂಚಿಕೊಳ್ಳುವ ಸಂಗಾತಿ ಬೇಕು ಎಂದು ಪರಿತಪಿಸುವ ಗಿರಿಜಾ, ಕಥಾನಾಯಕಿ. ಮಗ ಸೊಸೆಯರೊಂದಿಗಿದ್ದರೂ ತನ್ನವರಾಗಿ ಯಾರೂ ಇಲ್ಲ ಎಂದು ಪರಿತಪಿಸುತ್ತಾಳೆ. ಆದರೆ ತನ್ನಂತೆ ಒಂಟಿಯಾದ, ಪಕ್ಕದ ಮನೆಯಾತನ ಪರಿಚಯವಾದಾಗ, ದೊರೆಯುವ ಸ್ನೇಹ, ಸಾಂಗತ್ಯ, ದೇಶ, ಭಾಷೆ, ಸಂಸ್ಕೃತಿಗಳನ್ನೂ ಮೀರಿದಂತದ್ದಾಗಿರುತ್ತದೆ. ಅವಳು ಬಯಸುತ್ತಿದ್ದಂತೆ, ತನಗಾಗಿ ಸ್ಪಂದಿಸುವ ಜೀವದೊಡನೆ ತನ್ನ ಜೀವನದ ಪ್ರಮುಖ ತಿರುವನ್ನು ಕಾಣುತ್ತಾಳೆ. ಅನು ಶಿವರಾಂ ರವರ ಕಥೆ, ಹೆಣ್ಣಿನ ಮನದಾಳವನ್ನು ಹೊಕ್ಕು, ಅಲ್ಲಿನ ವೇದನೆಯನ್ನು ಪ್ರಕಟಿಸಿ, ಅದಕ್ಕೊಂದು ಪರಿಹಾರವನ್ನೂ ಕಂಡು ಸುಖಾಂತವನ್ನು ಕಾಣುತ್ತದೆ. ಸ್ತ್ರೀ ಸಮುದಾಯದ ಅನೇಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ಕ್ರಿಯಾಶೀಲರಾಗಿರುವ ಅನುಶಿವರಾಂ, ಇಲ್ಲಿನ ಕಥೆಯಲ್ಲೂ ನಮ್ಮ ಸಮಾಜದಲ್ಲಿನ ಸ್ತ್ರೀಯರ ಸಮಸ್ಯೆಯನ್ನು ಹೃದಯಂಗಮವಾಗಿ ಪರಿಚಯಿಸಿದರು.

ನವ ಪೀಳಿಗೆಯ ಕಥೆಗಾರ ಪ್ರತೀಕ್ ಮುಕುಂದ್, ಸಿಡ್ನಿಯ ಕನ್ನಡ ಸಮುದಾಯಕ್ಕೂ ನವ ಪರಿಚಯವೇ. ಆದರೆ ಕನ್ನಡದ ಪತ್ರಿಕೆಗಳಲ್ಲಿ ಇವರ ಕಥೆಗಳು ಪ್ರಕಟವಾಗಿದ್ದು, ಸಾಕಷ್ಟು ಹೆಸರು ಮಾಡಿದ್ದಾರೆ.ಇವರು ಪ್ರಸ್ತುತ ಪಡಿಸಿದ ಕಥೆ ಟ್ರಾನ್ಸಿಟ್. ಇಂದಿನ ಯುವ ಪೀಳಿಗೆಯ ಜೀವನ ಶೈಲಿಗೆ ಹಿಡಿದ ಕನ್ನಡಿಯಂತಿದ್ದ ಕಥೆ, ಬೆಂಗಳೂರ ಸೊಗಡಿನ ಆಡು ಮಾತುಗಳ ಸಂಭಾಷಣೆಯೊಂದಿಗೆ, ಕೆಲಕಾಲ ನಮ್ಮನ್ನು ಅಲ್ಲಿಗೇ ಕರೆದೊಯ್ದಿತ್ತು. ಕಥೆ ಇನ್ನಷ್ಟು ಮುಂದುವರೆದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎನಿಸಿದರೂ, ನವ್ಯ ಕಥೆ ಎಂಬ ಹಣೆಪಟ್ಟಿಗೆ ಸೂಕ್ತವೆನಿಸಿತು.

ವೀಡಿಯೋ ಚಿತ್ರೀಕರಣದ ಮೂಲಕ ನಮ್ಮ ಮುಂದೆ ಬಂದ ಖ್ಯಾತ ಕಥೆಗಾರ, ಅಂಕಣಕಾರ ಅಬ್ದುಲ್ ರಷೀದ್ ರವರ ಕಥೆಯಾಗುವ ಬಗೆಗಿನ ಮಾತುಗಳು ಎಷ್ಟು ಆಪ್ಯಾಯಮಾನವಾಗಿತ್ತೆಂದರೆ, ನಮ್ಮ ನಡುವಲ್ಲಿಯೇ ಕುಳಿತು ನಮ್ಮೊಡನೆಯೇ ಸಂಭಾಷಿಸುತ್ತಿದ್ದಾರೇನೋ ಎನ್ನುವಂತಹ ಮೋಡಿ ಮಾಡಿಬಿಟ್ಟಿದ್ದರು. ಅವರು ಮಾತನಾಡಿದ ನಂತರ, ಸುದರ್ಶನ್ ರವರು ಮುಂದುವರೆಸಿ, ರಷೀದರ ಸಂಪೂರ್ಣ ಪಾರಿಜಾತ ಎಂಬ ಕಥೆಯನ್ನು, ವಿಶ್ಲೇಷಿಸುತ್ತಲೇ ನಮ್ಮ ಮುಂದೆ ತೆರೆದಿಟ್ಟರು. ಒಂದು ಬಸ್ಸಿನ ಪ್ರಯಾಣದಲ್ಲಿ ನಡೆಯುವ ಘಟನೆಯೊಂದಿಗೆ ಹಲವಾರು ಪಾತ್ರಗಳ ಬದುಕಿನ ಪಯಣವನ್ನೇ ಅವಲೋಕಿಸುವ ವಸ್ತು, ನಮ್ಮ ಸುತ್ತಲೂ ಪ್ರತಿನಿತ್ಯ ನಡೆಯುವ ಘಟನೆಗಳನ್ನೇ ಎಷ್ಟು ಸ್ವಾರಸ್ಯಕರ ಕಥೆಯಾಗಬಲ್ಲದು ಎಂಬುದಕ್ಕೆ ಸಾಕ್ಷಿಯಾಗಿತ್ತು. ಬಷೀರರ ಕಥೆ ಕೇಳುಗರ ಮನಸ್ಸಿನಾಳಕ್ಕೆ ಇಳಿದು ಕಚಗುಳಿಯಿರಿಸಿ, ಎಲ್ಲರ ಮೊಗದಲ್ಲಿ ಮಂದಹಾಸ ಮೂಡಿಸಿತ್ತು.

ಎಲ್ಲ ಕಥೆಗಳಿಗೂ ಸೂಕ್ತ ಸ್ಥಿರಚಿತ್ರಗಳು ತೆರೆಯ ಮೇಲೆ ಮೂಡುತ್ತಾ, ಆಯಾ ಸನ್ನಿವೇಷಗಳಿಗೆ ಪೂರಕ ಹಿನ್ನೆಲೆ ಒದಗಿಸಿತ್ತು. ರಂಗಗೀತೆಗಳನ್ನು ಸೊಗಸಾಗಿ ಹಾಡಿ ಕಾರ್ಯಕ್ರಮಕ್ಕೆ ರಂಗು ತಂದವರು ಶ್ರೀಮತಿಶ್ರೀಗಳಾದ ವೀಣಾ ಮತ್ತು ಸುದರ್ಶನ್, ಅಪರ್ಣಾ ಮತ್ತು ನಾಗಶಯನ, ಲಕ್ಷಿ ಮತ್ತು ಅನಂತ ಹಳವಂಡಿ ಹಾಗೂ ಶ್ರೀಮತಿ ರೇಖಾಶಶಿಕಾಂತ್.

ವೀಣಾರವರು ವೇದಿಕೆಗೆ ಬಂದು ವಂದನಾರ್ಪಣೆ ಅರ್ಪಿಸಿದಾಗ, ಕಥೆಗಳ ಸಂಜೆ ಇಷ್ಟು ಬೇಗ ಮುಗಿದೇ ಹೋಯಿತೇ ಎನ್ನುತ್ತ ಎಲ್ಲರೂ ಕನಸಿನ ಲೋಕದಿಂದ ಹೊರಬಂದರು. ▪ (ಮತ್ತಷ್ಟು ಚಿತ್ರಗಳು ಮುಂದಿನ ಪುಟದಲ್ಲಿ)

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಅನಿವಾಸಿ ಕಲಾತಂಡ
ಅರ್ಪಿಸುವ
ಕುರಿತೋದುವ
ಕೊತ್ತು

ವಿಳಾಸ



ಏನು ಪ್ರಪಂಚವಿದು! ಏನು ಧಾಳಾಧಾಳಿ |
ಏನದ್ಭುತಾಪಾರಶಕ್ತಿನಿರ್ಘಾತ! ||
ಮಾನವನ ಗುರಿಯೇನು? ಬೆಲೆಯೇನು? ಮುಗಿವೇನು? |
ಏನರ್ಥವಿದಕೆಲ್ಲ? ಮಂಕುತಿಮ್ಮ ||

ಏನದ್ಭುತಾಪಾರಶಕ್ತಿ ನಿರ್ಘಾತ=ಏನು ಅದ್ಭುತ+ಅಪಾರ+ಶಕ್ತಿ,
ನಿರ್ಘಾತ=ಹೊಡೆತ..

ಇಲ್ಲಿಯವರೆಗೆ ಬಂದ 9 ಮುಕ್ತಕಗಳಲ್ಲಿ, ಮೊದಲ ಮೂರು ಮುಕ್ತಕಗಳಲ್ಲಿ, ಶ್ರೀ ಗುಂಡಪ್ಪನವರು, ಆ ಪರಮಾತ್ಮನೆಂದೆನಿಸಿಕೊಂಡ, ಪರಮಶಕ್ತಿಗೆ ನಮಿಸುತ್ತಾ, ಮುಂದಿನ ಮುಕ್ತಕಗಳಲ್ಲಿ ಮನುಷ್ಯನ ಜೀವನದ ಮತ್ತು ಸೃಷ್ಟಿಯ ವಿಚಿತ್ರಗಳನ್ನು ಬರೆದಿದ್ದಾರೆ. ಈ ಸಮಯಕ್ಕೆ ನಾ ಹಿಂದೆ ಹೇಳಿದಂತೆ ಎರಡನೇ ಮಹಾಯುದ್ಧ ಆರಂಭವಾಗಿ ಎಲ್ಲೆಲ್ಲೂ ಹಾಹಾಕಾರ ಧಾಳಿಗಳು. ಇವುಗಳನ್ನು ಕಂಡು ಅಂದಿನ ಸಮಯಕ್ಕೆ ಅವರ ಅನುಭೂತಿ ಏನಿತ್ತು ಎಂಬುದು ಮುಂದಿನ ಕೆಲವು ಮುಕ್ತಕಗಳಲ್ಲಿ ಕಾಣಬಹುದು.

ಈ ಪ್ರಪಂಚಕ್ಕೆ ಏನಾಗಿದೆ? ಏಕೆ ಈ ಮುತ್ತಿಗೆಗಳು? ಏನು ಈ ಹೊಡೆತಗಳು ಮತ್ತು ಆ ಹೊಡೆತಗಳ ಹಿಂದಿನ ಅಪಾರ ಶಕ್ತಿ ಏನು? ಮಾನವನ ಗುರಿಯೇನು? ಇದಕ್ಕೆಲ್ಲ ಬೆಲೆಯೇನು? ಇದಕ್ಕೆಲ್ಲ ಅಂತ್ಯವೇನು? ಮತ್ತು ಇದಕ್ಕೆಲ್ಲ ಏನು ಅರ್ಥ ಎಂಬ ಭಾವಗಳನ್ನು ವ್ಯಕ್ತಪಡಿಸುತ್ತಾ ಅಂದು ನಡೆಯುತ್ತಿದ್ದ ಪ್ರಾಪಂಚಿಕ ವಿದ್ಯಮಾನಗಳನೆಲ್ಲ ಒಟ್ಟುಗೂಡಿಸಿ ಹಲವು ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತಾರೆ.

ಯಾರೋ ಒಬ್ಬ ಸರ್ವಾಧಿಕಾರಿಯ ಅಧಿಕಾರ ದಾಹ, ಅಧಿಕಾರವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆ ಮತ್ತು ಅಹಂಕಾರವನ್ನು ತಣಿಸುವ ಅತೀ ಆಸೆಗೆ ಬಲಿಯಾದದ್ದು ಇಡೀ ವಿಶ್ವ. ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರದ ಮೇಲೆ ದಾಳಿ. ಆ ರಾಷ್ಟ್ರಕ್ಕೆ ಕೆಲವು ಮತ್ತು ಈ ರಾಷ್ಟ್ರಕ್ಕೆ ಕೆಲವು ರಾಷ್ಟ್ರಗಳು ಸಹಾಯಕ್ಕೆ ನಿಲ್ಲುತ್ತವೆ. ಆಗ ಈ ಎರಡೂ ರಾಷ್ಟ್ರಗಳು ಮತ್ತು ಆ ರಾಷ್ಟ್ರಗಳ ಸಹಾಯಕ್ಕೆ ನಿಂತ ಬೇರೆ ರಾಷ್ಟ್ರಗಳ ಎಲ್ಲ ಸೈನಿಕರೂ ಹೊಡೆದಾಡುತ್ತಾರೆ. ಯಾರು, ಯಾರ ಮೇಲೋ ದಾಳಿ. ದಾಳಿಗೊಳಗಾದ ರಾಷ್ಟ್ರಕ್ಕಾಗಲೀ ದಾಳಿಮಾಡಿದ ರಾಷ್ಟ್ರಕ್ಕಾಗಲೀ ದಾಳಿಯ ಕಾರಣವೇ ತಿಳಿದಿರುವುದಿಲ್ಲ. ಆದರೆ ಹೊಡೆದಾಡುವುದು, ಪಾಪ ಮುಗ್ಧ ಸೈನಿಕರು. ಕೇವಲ ಜೀವಿಕೆಗಾಗಿ. ಇದು ಮಾನವನ ಜೀವನದ ಇತಿಹಾಸದಲ್ಲಿ ನಿರಂತರವಾಗಿ ನಡೆದಿದೆ. ಕ್ರಿಸ್ತಪೂರ್ವ ಸುಮಾರು 325 ವರ್ಷದಲ್ಲಿ ಅಲೆಕ್ಸಾಂಡರನ ವಿಶ್ವ ವಿಜಯ ಯಾತ್ರೆಯಿಂದ ಹಿಡಿದು, ಇಂದಿನವರೆಗೆ ನಡೆದ ಯುದ್ಧಗಳು ಆಯಾ ರಾಷ್ಟ್ರಗಳ ನಾಯಕರ ಬೌದ್ಧಿಕ ಮತ್ತು ನೈತಿಕ ದಿವಾಳಿತನದಿಂದಲೇ ನಡೆದಿದೆ ಅಲ್ಲವೆ?

ಅಂತಹ ಒಂದು ಸ್ಥಿತಿಯೇ 2ನೇ ಮಹಾಯುದ್ಧದ ಕಾಲದಲ್ಲಿ ಹಿಟ್ಲರನ ತಿಳಿಗÉೀಡಿತನದಿಂದಾಗಿ ಆರಂಭವಾಗಿ ವಿಶ್ವವೆಲ್ಲ ಹರಡಿ ಹಲಕೆಲವರು ಕೆಲಕೆಲವರ ಪಕ್ಷ ಹಿಡಿದು ಹೋರಾಡಿ, ಇಡೀ ಪ್ರಪಂಚವನ್ನು ವಿನಾಶದಂಚಿಗೆ ತಳ್ಳಿದರು. ಘನಘೋರ ಯುದ್ಧ, ಅಪಾರ ಶಕ್ತಿಯ ವ್ಯಯ, ಸಾವು ನೋವು. ಪ್ರತಿ ದೇಶಕ್ಕೂ ಯುದ್ಧಕ್ಕಾಗಿ ಅಪಾರ ವೆಚ್ಚ. ಆ ವೆಚ್ಚವನ್ನು ಭರಿಸಲಿಕ್ಕಾಗಿ ಅಧಿಕ ಕರಗಳು ಮತ್ತು ಕರಭಾರದಿಂದ ತತ್ತರಿಸಿದ ಪ್ರಜೆಗಳು. ಯುದ್ಧದಲ್ಲಿ ಸಾವು ನೋವುಗಳು. ಇದೂ ಸಾಲದೆಂಬಂತೆ ಅಂದು ಇಡೀ ಪ್ರಪಂಚದಲ್ಲೇ 'ಬರ'ದ ಕರಾಳ ನೃತ್ಯ. ಎಲ್ಲದಕ್ಕೂ ಕೊರತೆ, ಕಾಲರಾ, ಪ್ಲೇಗ್ ನಂತಹ ಸೋಂಕು ರೋಗಗಳ ರುದ್ರ ನರ್ತನ. ನೋವು ಮಾತ್ರ ಅಧಿಕ. ಇದನ್ನು ಕಂಡೇ ಗುಂಡಪ್ಪನವರು, "ಮಾನವನ ಗುರಿಯೇನು"? ಎಂದು ಪ್ರಶ್ನಿಸುತ್ತಾರೆ. ಇದಕ್ಕೆಲ್ಲ ಏನು ಅರ್ಥ? ಎಂದು ಕೇಳುತ್ತಾರೆ.

ವಾಚಕರೆ, ನಿವ್ಮಲ್ಲಿ ಬಹಳಷ್ಟು ಜನಗಳಿಗೆ ಗೊತ್ತೋ ಇಲ್ಲವೋ ನನಗೆ ಗೊತ್ತಿಲ್ಲ, ಅಂದು ಅನ್ನಕ್ಕೆ ಬರ. ಬಟ್ಟೆಗೆ ಬರ. ಹಾಲು ನೀರಿಗೂ ಬರ. ಪ್ರತಿ ಊರಿನಲ್ಲೂ ಗಂಜಿ ಕೇಂದ್ರಗಳು. ಪ್ರತಿಯೊಬ್ಬರಿಗೂ ಬೆಳಗ್ಗೆ ಎರಡು ಸೌಟು ಮತ್ತು ಸಂಜೆ ಎರಡು ಸೌಟು ಗಂಜಿ. ಬಟ್ಟೆ ಬೇಕಾದರೆ, ಸರ್ಕಾರದಿಂದ ಪರವಾನಗಿ ತೆಗೆದುಕೊಂಡು ಗುಟ್ಟಲ್ಲಿ ಖರೀದಿ ಮಾಡಬೇಕಾದ ಪರಿಸ್ಥಿತಿ. ಅಂತಹ ಪರಿಸ್ಥಿತಿಗೆ ಅರ್ಥವೇನು? ಎಂದು, ಅದು ಕೇವಲ ಅಂದರೆ ಅರ್ಥಹೀನ ಎಂಬ ರೀತಿ ಗುಂಡಪ್ಪನವರು ಪ್ರಶ್ನಿಸುತ್ತಾರೆ.

ಇಂದು ಕೂಡ ಈ ಪರಸ್ಥಿತಿ ಬದಲಾಗಿಲ್ಲ. ಅಂದು ಕೊರತೆಯಿಂದ ಇಂದು ಆಧಿಕ್ಯದಿಂದ ಮಾನವನಿಗೆ ತೊಂದರೆ. ಅಹಂಕಾರದ, ದ್ವೇಷದ, ಯುದ್ಧಗಳ, ನೋವಿನ, ಕೊರತೆಗಳ ರೂಪ ಬೇರೆ ಅಷ್ಟೇ! ಇಂದು ಕೂಡ ನಾವು ಅಂದು ಅವರು ಕೇಳಿದ ಪ್ರಶ್ನೆಗಳನ್ನೇ ಕೇಳುವ ಸ್ಥಿತಿ ಇದೆ ಅಲ್ಲವೇ? ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಅರ್ಥಶಾಸ್ತ್ರಕ್ಕೆ ನವನವೀನ ಅರ್ಥಗಳು

ಉತ್ತರಪತ್ರಿಕೆಗಳಿಗೆ ಒಂದು ವಿಧವಾದ ಉತ್ತರಕ್ರಿಯೆಯಾದ ಮೌಲ್ಯಮಾಪನ ಕಾರ್ಯಕ್ಕೆಂದು ಅರ್ಥಶಾಸ್ತ್ರ ಪ್ರವೀಣನಾದ ನಾನು ಮೌಲ್ಯಮಾಪನ ಕೇಂದ್ರಕ್ಕೆ ತೆರಳಿದೆ. ಮೊದಲಿಗೆ 00420 ಸಂಖ್ಯೆಯ ವಿದ್ಯಾರ್ಥಿಯೊಬ್ಬ ಪ್ರಶ್ನೆಗಳಿಗೆ ನೀಡಿದ ಪ್ರಶ್ನೋತ್ತರಗಳನ್ನು ನೋಡತೊಡಗಿದೆ.

ಪ್ರಶ್ನೆ: ಹಣ ಎಂದರೇನು?

ಉತ್ತರ: ಪ್ರತಿ ಯಂತ್ರವೂ ಘರ್ಷಣೆ ಇಲ್ಲದೆ ಸುಗಮವಾಗಿ ಚಲಿಸಲು ಲ್ಯೂಬ್ರಿಕೆಂಟ್ ಬಳಸಲಾಗುತ್ತದೆ. ಜೀವನಯಂತ್ರ ಸುಗಮವಾಗಿ ಚಲಿಸುವುದಕ್ಕೆ ಪೂರಕವಾದ ಲ್ಯೂಬ್ರಿಕೆಂಟೇ ಹಣ.

ಪ್ರಶ್ನೆ: ಆಪದ್ಧನ ಎಂದರೇನು?

ಉತ್ತರ: ಪೇರಿಸಿಕೊಂಡಷ್ಟೂ ಮನಕ್ಕೆ ಸಂತಸ ಕೊಟ್ಟು, ಲೋಕಾಯುಕ್ತರು ಬಂದಾಗ ಮಾತ್ರ ಕೈಗೆ ಬೇಡಿ ತರುವುದರ ಮೂಲಕ ಆಪತ್ತನ್ನು ಉಂಟುಮಾಡುವಂತಹ ಧನಕ್ಕೆ ಆಪದ್ಧನ ಎನ್ನುತ್ತಾರೆ.

ಪ್ರಶ್ನೆ: ಭವಿಷ್ಯನಿಧಿ ಎಂದರೇನು?"

ಉತ್ತರ: ಭವಿಷ್ಯ ಕೇಳಿದವರ ಮನದಲ್ಲಿ ಭಯದ ಭೂತ ಹೊಕ್ಕುವಂತೆ ಮಾಡಿ ಸಂಪಾದಿಸಿದ ನಿಧಿಯೇ ಭವಿಷ್ಯನಿಧಿ.

ಪ್ರಶ್ನೆ: ಇಡುಗಂಟು ಎಂದರೇನು?

ಉತ್ತರ: ಪಕ್ಷದಿಂದ ಪಕ್ಷಕ್ಕೋ ಅಥವಾ ಅದೇ ಪಕ್ಷದಲ್ಲಿಯೇ ಹೆಚ್ಚು ಇಳುವರಿ ದೊರಕುವ ಸ್ಥಳಕ್ಕೋ ತಲುಪಲು ಪಕ್ಷದ ವರಿಷ್ಠರ ಅನುಮತಿ ಕೇಳಿದಾಗ ಅವರು ಹೇಳುವ ಮಾತು ಇದು. ಗಂಟು ಇಟ್ಟರೆ ಮಾತ್ರ ನಂಟು; ಇಲ್ಲವಾದರೆ ಬರೀ ಸ್ಟಂಟು.

ಪ್ರಶ್ನೆ: ಲಂಚ ಎಂದರೇನು?

ಉತ್ತರ: ಸರ್ಕಾರವೆಂಬ ಯಂತ್ರ ಚಲಿಸಲು ಅಗತ್ಯವಾದ ಇಂಧನ.

ಪ್ರಶ್ನೆ: ಬಂಡವಾಳ ಎಂದರೇನು?

ಉತ್ತರ: ಪ್ರತಿಯೊಬ್ಬರಿಗೂ ಅವರವರದೇ ಬಂಡವಾಳವಿರುತ್ತದೆ. ಚುನಾವಣೆಯ ಸಮಯ ಬಂದಾಗ ಇದು ಹೊರಬರುತ್ತದೆ. ಇಂದಿನ ದಿನಗಳಲ್ಲಿ ಅತ್ಯುತ್ತಮ ಬಂಡವಾಳವೆಂದರೆ ಭಂಡ ಬಾಳೇ ಎನ್ನುವುದನ್ನು ಆರ್ಥಿಕ ತಜ್ಞರು ಒಪ್ಪುತ್ತಾರೆ.

ಪ್ರಶ್ನೆ: ಷೇರು ಮಾರುಕಟ್ಟೆ ಎಂದರೇನು?

ಉತ್ತರ: ಹೂಡುವಾಗ ಷೇರ್ ಎಂದರೆ ಪಾಲು ಎಂಬ ಅರ್ಥವನ್ನು ಹೊಂದಿದ್ದು, ಹೂಡಿಕೆಯ ನಂತರದ ದಿನಗಳಲ್ಲಿ ಶೇರ್ ಎಂದರೆ ಹುಲಿ ಎಂಬ ಅರ್ಥದಲ್ಲಿ ಹೂಡಿಕೆದಾರನ ಮೇಲೆಯೇ ಎರಗಿ ತೊಂದರೆ ಕೊಡಲು ಸಮರ್ಥವಾಗಿರುವ ಮಾರುಕಟ್ಟೆಯೇ ಷೇರ್ ಮಾರುಕಟ್ಟೆ

ಪ್ರಶ್ನೆ: ಬಜೆಟ್ ಎಂದರೇನು?

ಉತ್ತರ: ಸರ್ಕಾರವು ಔಪಚಾರಿಕವಾಗಿ ವರ್ಷಕ್ಕೊಮ್ಮೆ ಎಲ್ಲದರ ದರವನ್ನು ಏರಿಸುವ ಪ್ರಕ್ರಿಯೆಯನ್ನು ಬಜೆಟ್ ಎನ್ನಲಾಗುತ್ತದೆ. ಅನೌಪಚಾರಿಕವಾಗಿ ಆಗಾಗ್ಗೆ ಏರುವ ಬೆಲೆಗಳನ್ನು ಹೀಗೆ ಕರೆಯಲಾಗುವುದಿಲ್ಲ.

ಪ್ರಶ್ನೆ: ಸಂಬಳ ಎಂದರೇನು?

ಉತ್ತರ: ಸಾಮಾನ್ಯವಾಗಿ ನೀರಿನಲ್ಲಿ ಉಪ್ಪು ಕರಗುವುದಕ್ಕಿಂತ ಕಡಿಮೆ ಸಮಯದಲ್ಲಿ ಕಣ್ಮರೆಯಾಗುವ ನೋಟುಗಳ ಕಂತೆ.

ಪ್ರಶ್ನೆ: ದರ ಎಂದರೇನು?

ಉತ್ತರ: ದರಕ್ಕೆ ಹಲವಾರು ಅರ್ಥಗಳಿವೆ. ಸರ್ಕಾರಕ್ಕೆ ಆದರವಿರುವ ಜಾತಿಗಳಿಗೆ ಕನಿಷ್ಠ ಬೆಲೆಯಾಗಿಯೂ, ಅನಾದರ ಇರುವ ಜಾತಿಗಳಿಗೆ ಗರಿಷ್ಠ ಬೆಲೆಯಾಗಿಯೂ ನಿರ್ಧರಿಸಲಾಗುವ ಮೊತ್ತಕ್ಕೆ ದರ ಎನ್ನುತ್ತಾರೆ. ವ್ಯಾವಹಾರಿಕ ದೃಷ್ಟಿಯಲ್ಲಿ ಉತ್ಪಾದನೆ+ಸುಂಕದಕಟ್ಟೆ ಲಂಚ+ ಟ್ಯಾಕ್ಸಿನವರಿಗೆ ಲಂಚ+ ಟ್ರೇಡ್ ಯೂನಿಯನ್ ಲಂಚ+ ಎಲೆಕ್ಷನ್ ಫಂಡ್+ಲಾಭ = ದರ. ಗುಂಪುಘರ್ಷಣೆಗಳು ನಡೆದಾಗ ಪೊಲೀಸರು ಜನರನ್ನು ಎಳೆದಾಡುವ ಕ್ರಮಕ್ಕೂ ದರ ಎನ್ನುತ್ತಾರೆ; ಉದಾ: ದರದರನೆ ಎಳೆದರು!

ಪ್ರಶ್ನೆ: ಲಾಭ ಮತ್ತು ನಷ್ಟಗಳು ಎಂದರೇನು? ಅವು ಏಕೆ ಆಗುತ್ತವೆ?

ಉತ್ತರ: ಲಾಬಿಯಿಂಗ್‌ನಿಂದ ದೊರಕುವುದೇ ಲಾಭ. ನಷ್ಟಕ್ಕೆ ಇಂತಹುದೇ ಕಾರಣವೆಂದೇನಿಲ್ಲ. ರಸ್ತೆಯಲ್ಲಿ ಆಟೋದವನಿಗೆ ಬೈದರೆ, ಅಹಿಂದವನ್ನು ಹಿಂದವೋ, ಹಿಂದವನ್ನು ಅಲ್ಪವೋ, ಅಲ್ಪವನ್ನು ಬಹುವೋ ಬೈದಾಗ ಉಂಟಾಗುವ ರ್ಯಾಲಿ, ಹರತಾಳ, ಸಂಪು, ಕಿಡಿ, ಕಿಡಿಗೇಡಿ ಎಲ್ಲದರಿಂದಲೂ ನಷ್ಟ ಆಗಬಹುದು.

ಪ್ರಶ್ನೆ: ಬಡವನಿಗೂ, ಶ್ರೀಮಂತನಿಗೂ ವ್ಯತ್ಯಾಸವೇನು?

ಮುಂದಿನ ಪುಟ ನೋಡಿ ...

ಉತ್ತರ: ಹೆಚ್ಚೇನಿಲ್ಲ. ಬಹಳ ಬಡವನ ಹೆಂಡತಿ ದೂರವಾದರೆ ಪೀಡೆ ಕಳೆಯಿತು ಎಂದು ಸುಮ್ಮನಾಗುತ್ತಾನೆ. ಬಹಳ ಶ್ರೀಮಂತನ ಹೆಂಡತಿ ದೂರವಾದರೆ ಟೈಮ್ ಫಾರ್ ಛೇಂಜ್ ಎನ್ನುತ್ತಾ ಸುಮ್ಮನಾಗುತ್ತಾನೆ. ಅತಿ ಬಡವರು ಮತ್ತು ಅತಿ ಶ್ರೀಮಂತರು ಇಬ್ಬರೂ ಹರಕು ಧರಿಸುತ್ತಾರೆ. ಬಡವನಿಗೆ ಇಲ್ಲದಿರುವುದರಿಂದ ಉಪವಾಸ; ಶ್ರೀಮಂತನಿಗೆ ರೋಗವಿರುವುದರಿಂದ ಉಪವಾಸ. ಶ್ರೀಮಂತನೆಂದರೆ ಬಹಳ ಹಣ ಇರುವ ಬಡವ ಎಂದೇ ಅರ್ಥ.

ಪ್ರಶ್ನೆ: ನಗದು ಎಂದರೇನು?

ಉತ್ತರ: ನಗದು ಎಂದರೆ ಬ್ಯಾಂಕಿನ ಕೌಂಟರ್ ಹಿಂದೆ ಕುಳಿತ ಹೆಣ್ಣು. ಅದು ಎಂದಿಗೂ ನಗದು ಎನ್ನುತ್ತಾರೆ ಕವಿ ಧುಂಡಿರಾಜ್. ನಗದಿನ ಗಂಟು ಏರಿದಷ್ಟೂ ಹುಬ್ಬಿನ ಗಂಟು ಏರುತ್ತದೆ ಎನ್ನುವುದು ವೈಜ್ಞಾನಿಕ ಸತ್ಯ.

ಪ್ರಶ್ನೆ: ನಮ್ಮ ದೇಶದಲ್ಲಿ ಬಂಡವಾಳ ಹೂಡಲು ಅತ್ಯುತ್ತಮ ಕ್ಷೇತ್ರಗಳು ಯಾವುವು? ಅಂತಹ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿದರೆ ಆಗುವ ಪರಿಣಾಮಗಳೇನು?

ಉತ್ತರ: ನಮ್ಮ ದೇಶದಲ್ಲಿ ಬಂಡವಾಳ ಹೂಡಲು ಅತ್ಯುತ್ತಮ ಕ್ಷೇತ್ರಗಳು ಎರಡು - ಇಂಗ್ಲಿಷ್ ಶಾಲೆ ಮತ್ತು ರಾಜಕೀಯ. ಶಾಲೆಗಳಲ್ಲಿ ಬಂಡವಾಳ ತೊಡಗಿಸುವುದರಿಂದ "ಲಕ್ಷ್ಮಿ ಮತ್ತು ಸರಸ್ವತಿ ಒಂದೇ ಕಡೆ ಇರುವುದಿಲ್ಲ" ಎಂಬ ಹಳೆಯ ಗಾದೆ ಸುಳ್ಳಾಗುತ್ತದೆ. ರಾಜಕೀಯದಲ್ಲಿ ಬಂಡವಾಳ ಹೂಡುವುದರಿಂದ ಪರಕೀಯವಾದುದೆಲ್ಲ ಸ್ವಕೀಯವಾಗುತ್ತದೆ.

ಪ್ರಶ್ನೆ: ಸಾಲ ಎಂದರೇನು?

ಉತ್ತರ: ಇದು ಮಧ್ಯಮ ವರ್ಗದವರ ಜೀವನಾಡಿ; ಶ್ರೀಮಂತರ ಫ್ಯಾಷನ್. ಅತಿ ಹೆಚ್ಚು ಸಾಲ ಮಾಡಿದವರಿಗೆ ವಿದೇಶದಲ್ಲಿ ನೆಲೆಸುವ ಯೋಗ ಉಂಟಾಗುತ್ತದೆ. ಸರ್ಕಾರದ ಅರ್ಥದಲ್ಲಿ - ಮುಂದೆ ಮನ್ನಾ ಮಾಡುವುದಕ್ಕೆಂದೇ ಇಂದು ನೀಡಲ್ಪಡುವ ಅನ್ಯರ ತೆರಿಗೆಯ ಹಣವೇ ಸಾಲ. "ಸಾಲವನು ಕೊಂಬಾಗ ಹಾಲೋಗರುಂಡಂತೆ; ಸಾಲವನ್ನು ಮನ್ನಾ ಮಾಡಿದಾಗ ಫುಲ್ ಪಾರ್ಟಿ ಎಂದನಂತೆ ಅರ್ಥಜ್ಞ" ಎನ್ನುವುದೇ ಇಂದಿನ ಗಾದೆ.

ಪ್ರಶ್ನೆ: ಹಣದುಬ್ಬರ ಎಂದರೇನು?

ಉತ್ತರ: ಇದು ಮಂತ್ರಿಗಳ ಉದರದ ಆಕಾರದ ಮೇಲೆ ಆಧಾರಿತವಾಗಿರುತ್ತದೆ. ಅವರ ಹೊಟ್ಟೆ ಉಬ್ಬರ ಹೆಚ್ಚಾದಷ್ಟೂ ಹಣದ ಉಬ್ಬರ ಹೆಚ್ಚಾಗುತ್ತದೆ.

ಪ್ರಶ್ನೆ: ಬ್ಯಾಂಕ್ ಎಂದರೇನು?

ಉತ್ತರ: ನಿಷೇಧಿತ ನೋಟುಗಳ ಲಾಂಡ್ರಿ.

ಪ್ರಶ್ನೆ: ಫಿಕ್ಸೆಡ್ ಡಿಪಾಸಿಟ್ ಎಂದರೇನು?

ಉತ್ತರ: ನದಿಯ ತಳಗಳಲ್ಲಿ, ಕೆರೆಯ ತಳಗಳಲ್ಲಿ ಮತ್ತು ಅಣೆಕಟ್ಟುಗಳ ತಳಗಳಲ್ಲಿ ವರ್ಷಗಳಿಂದ ಯಾರೂ ಅಲುಗಾಡಿಸದೆ, ಎತ್ತದೆ ಬಿಟ್ಟ ಹೂಳನ್ನೇ ಫಿಕ್ಸೆಡ್ ಡಿಪಾಸಿಟ್ ಎನ್ನುತ್ತಾರೆ. ವೈಯಕ್ತಿಕವಾಗಿ ದಂತಗಳಲ್ಲಿ ಸಹ ಇಂತಹ ಫಿಕ್ಸೆಡ್ ಡಿಪಾಸಿಟ್‌ಗಳು ಕಂಡುಬಂದರೂ, ಇವು ದಂತವೈದ್ಯರ ದಾಳಿಗೆ ಅಲುಗಿ ಪ್ರಿಮೆಚ್ಯೂರ್ ಕ್ಲೋಶರ್ ಆಗುವ ಸಾಧ್ಯತೆ ಇರುವುದರಿಂದ ಇವು ಹೂಳಿನ ಡಿಪಾಸಿಟ್‌ಗಳಷ್ಟು ದೃಢವಾದ ಡಿಪಾಸಿಟ್‌ಗಳಲ್ಲ.

ಪ್ರಶ್ನೆ: ಬಡ್ಡಿ ಎಂದರೇನು? ಇದರಲ್ಲಿ ಎಷ್ಟು ವಿಧಗಳಿವೆ?

ಉತ್ತರ: ಬಡ್ಡಿ ವ್ಯವಹಾರದಲ್ಲೇ ತೊಡಗಿರುವವರ ಮಕ್ಕಳನ್ನು ಬಡ್ಡಿಮಗ ಎನ್ನುತ್ತಾರೆ. ಇಂತಹ ಮಕ್ಕಳ ಅಪ್ಪನೇ ಬಡ್ಡಿ! ಇದರಲ್ಲಿ ಮೂರು ವಿಧ; ಮೊದಲನೆಯದು ಸರಳವಾಗಿ ಲೆಕ್ಕ ಹಾಕಿ, ಸರಳವಾಗಿಯೇ ಕಿರುಚಾಡಿ ವಸೂಲಿ ಮಾಡಲು ಯೋಗ್ಯವಾದ ಸರಳಬಡ್ಡಿ; ಎರಡನೆಯದು ಬ್ಯಾಂಕಿನವರು ನಾಲ್ಕು ಚಕ್ರದ ವಾಹನ ಮಾಡಿಕೊಂಡು ಅಲೆದಲೆದು ವಸೂಲಿ ಮಾಡುವ ಚಕ್ರ ಬಡ್ಡಿ; ಮೂರನೆಯದು ಮೀಟರ್ ಬಡ್ಡಿ; ಇದು ಆಟೋರಿಕ್ಷಾಗಳಿದ್ದಂತೆ. ರೌಡಿಗಳು ವಿಧಿಸುವ ಈ ಬಡ್ಡಿಯು ಸುಳ್ಳು ಆಟೋಮೀಟರ್‌ಗಿಂತಲೂ ವೇಗವಾಗಿ ಏರುವಂತಹ ಬಡ್ಡಿಯಾಗಿರುತ್ತದೆ

ಪ್ರಶ್ನೆ: ನಮ್ಮ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡ ಎಲ್ಲರೂ ಹಣ ಹಿಂತಿರುಗಿಸುವರೆ?

ಉತ್ತರ: ಇಲ್ಲ. ಸಮ್ ಪೀಪಲ್ ಆರ್ ನಾಟ್ ಪ್ರಿನ್ಸಿಪಲ್ಡ್ ಎನಫ್ ಟು ಪೇ ಎ ಇಂಟರೆಸ್ ಎಂಡ್ ಸಮ್ ಹ್ಯಾವ್ ನೋ ಇಂಟರೆಸ್ಟ್ ಟು ಪೇ ದ ಪ್ರಿನ್ಸಿಪಲ್.

ಪ್ರಶ್ನೆ: ಅತ್ಯುತ್ತಮ ಆರ್ಥಿಕ ವ್ಯವಸ್ಥೆ ಯಾವುದು?

ಉತ್ತರ: ಪಾರಮಾರ್ಥಿಕ!

ಎಲ್ಲ ಪ್ರಶ್ನೆಗಳಿಗೂ ಅವನು ನೀಡಿರುವ ಉತ್ತರಗಳು ತಪ್ಪು; ಆದರೂ ಎಲ್ಲ ಉತ್ತರಗಳೂ ಸರಿ. ಏನು ಮಾಡುವುದೆಂದು ಬಹಳವೇ ಯೋಚಿಸಿದೆ. ಕಡೆಗೆ ಈ ಕೆಳಕಂಡ ತೀರ್ಮಾನಕ್ಕೆ ಬಂದು, ಬರೆದೆ.

ಮಾರ್ಕ್ಸ್ - ಸೊನ್ನೆ;

ರಿಮಾರ್ಕ್ಸ್ : ತರಗತಿಯ ಪರೀಕ್ಷೆಗಳಲ್ಲಿ ಫೇಲ್; ಜೀವನದ ಪರೀಕ್ಷೆಯಲ್ಲಿ ಫಸ್ಟ್ ರ್ಯಾಂಕ್!

ಒಪ್ಪುತ್ತೀರಲ್ಲವೆ? ▪



ಮೂವರು ಬ್ರಾಹ್ಮಣ ಪುತ್ರರು

ಕನಕಾಪುರ ನಾರಾಯಣ

ಹಿಂದೆ ಓರ್ವ ಬ್ರಾಹ್ಮಣ ಮಹಾ ಯಜ್ಞ ಮಾಡಲು ಅಣಿ ಮಾಡಿಕೊಳ್ಳುತ್ತಿರಲು ತನ್ನ ಮೂರೂ ಮಕ್ಕಳನ್ನು ಒಂದು ಆಮೆಯನ್ನು ಬಲಿಗಾಗಿ ತರಲು ಹೇಳಿದ. ಆ ಮೂವರು ಮಕ್ಕಳು ಒಂದೊಂದು ರೀತಿಯಲ್ಲಿ ಕೆಟ್ಟ ಚಟ ಉಳ್ಳವರಾಗಿದ್ದರು. ಮೊದಲ ಮಗನು ರುಚಿಕರ ಊಟಮಾಡುವಲ್ಲಿ ತುಂಬಾ ದುರಾಸೆ ಉಳ್ಳವನಾಗಿದ್ದನು. ಎರಡನೆಯವನಿಗೆ ಅಪಾರ ಹೆಣ್ಣಿನ ಚಟವಿತ್ತು. ಮೂರನೆಯವನಿಗೆ ಸದಾ ಸುಪ್ಪತ್ತಿಗೆಯ ಮೇಲೆ ಮಲಗುವ ಚಟವಿತ್ತು.

ಆಮೆಯನ್ನು ಹುಡುಕಿ ಹೋರಟ ಅವರಿಗೆ ಅಂದು ಆಮೆ ಕಂಡರೂ ಅದನ್ನು ಮುಟ್ಟಲು ತಾವು ಅರ್ಹರಲ್ಲ ತಾವು ಪಾಪಿಗಳು ಎಂದು ತಂದೆಯ ಬಳಿಗೆ ಬಂದು ಹೇಳಿದರು. ತಂದೆ ಅವರಿಗೆ ಇಂದೊಂದು ಪರೀಕ್ಷೆ ನಡೆಸಿದರು. ಮೊದಲ ಮಗನಿಗೆ ಭಾರಿ ಭೋಜನ ಏರ್ಪಡಿಸಿದನು. ಆದರೆ ಆತನು ಅದನ್ನು ಉಣಲಿಲ್ಲ, ಅನ್ನದಲ್ಲಿ ಸುಟ್ಟ ವಾಸನೆ ಇದೆ, ಅದನ್ನು ಬೆಳೆದ ಜಾಗದ ಬಳಿ ಸ್ಮಶಾನ ಇರಬೇಕು ಎಂದ. ತಂದೆ ಅವನ ಜಾಣ್ಮೆ ಮೆಚ್ಚಿದ.

ಎರಡನೆಯ ಮಗನಿಗೆ ಒಬ್ಬ ಅತಿಯಾದ ಸುಂದರಿಯ ಜೊತೆ ಒಂದು ರಾತ್ರಿ ಕಳೆಯಲು ಹೇಳಿದ. ಆದರೆ ಆಕೆಯನ್ನು ಅವನು ಮುಟ್ಟಲೂ ಇಲ್ಲ, ಏಕೆಂದು ಕೇಳಲು ಆಕೆಯಬಳಿ ಮೇಕೆಯ ವಾಸನೆ ಇದೆ. ಬಹುಶಃ ಆಕೆಗೆ ಚಿಕ್ಕಂದಿನಿಂದಲೂ ಮೇಕೆ ಹಾಲು ಕುಡಿಸಿ ಬೆಳೆಸಿರಬೇಕು ಎಂದ. ತಂದೆ ಅವನ ಜಾಣ್ಮೆಯನ್ನೂ ಮೆಚ್ಚಿದ.

ಮೂರನೆಯ ಮಗನಿಗೆ ಏಳು ಮೆತ್ತನೆಯ ಹಾಸಿಗೆಯ ಮೇಲೆ ಒಂದು ರಾತ್ರಿ ಮಲಗಲು ಹೇಳಿದ. ಆತ ನಿದ್ರೆ ಮಾಡಲು ಆಗಲಿಲ್ಲ, ಏನೋ ಕಸಿವಿಸಿ ಆಗುತ್ತಿದೆ ಎಂದು ತನ್ನ ಕೆಳಗಿನ ಎರಡನೇ ಹಾಸಿಗೆಯ ಕೆಳಗೆ ನಾಲ್ಕಾರು ಉದ್ದನೆಯ ಕೂದಲು ಇದೆ,ಅದರಿಂದ ನನಗೆ ನಿದ್ರಿಸಲು ಆಗುತ್ತಿಲ್ಲ ಎಂದ. ತಂದೆ ಆತನ ಜಾಣ್ಮೆಗೆ ಮೆಚ್ಚಿ ನೀನೇ ನಿಜವಾದ ಜಾಣ ಮತ್ತು ಯೋಗ್ಯವಾದ ವ್ಯಕ್ತಿ ಎಂದು ನಿರ್ಧರಿಸಿದ..... ಎಂದು ಹೇಳಿ ಕಥೆ ಅಲ್ಲಿಗೇ ನಿಲ್ಲಿಸಿತು ಬೇತಾಳ.....

ಬೆನ್ನು ಹತ್ತಿದ ಬೇತಾಳ ಕಥೆ ಹೇಳಿ, ಪ್ರಶ್ನೆ ಕೇಳಿ ವಿಕ್ರಮಾದಿತ್ಯನ ಬುದ್ಧಿ ಮತ್ತೊಮ್ಮೆ ಪರೀಕ್ಷೆ ಮಾಡುತ್ತಿತ್ತು.ವಿಕ್ರಮನು ಮೌನವಾಗಿದ್ದರೆ ತಲೆ ಸಿಡಿದುಬಿಡುತ್ತದೆ, ನ್ಯಾಯವಾದ ಉತ್ತರವಿಲ್ಲದಿದ್ದರೆ ಆತನ ಹೆಸರಿಗೆ ಕಳಂಕ ಎಂದು ಹೆದರಿಸಿತು.

ಬೇತಾಳದ ಪ್ರಶ್ನೆ: ಮೂರನೇ ಮಗನೇ ಜಾಣ ಮತ್ತು ಯೋಗ್ಯ ಎಂದು ಹೇಗೆ ನಿರ್ಧಾರವಾಯಿತು ?

ವಿಕ್ರಮನ ತತ್ಕ್ಷಣದ ಉತ್ತರ: "ಉಳಿದಿಬ್ಬರ ಹೇಳಿಕೆಗೆ ಮಾಹಿತಿ ಬೇರೆಯವರಿಂದ ತಿಳಿದಿರಬಹುದು ಆದರೆ ಮೂರನೆಯ ಮಗನ ಹೇಳಿಕೆ ಅವನ ಸ್ವಂತ ಅನುಭಾವದ್ದು" ಎಂದ.

ಕೂಡಲೇ ಬೇತಾಳ ವಿಕ್ರಮನ ಬೆನ್ನು ಬಿಟ್ಟು ಹಾರಿ ಹೋಯಿತು. ▪

ಕೇಸರಿ ಬಾದಾಮಿ ಕುಲ್ಫಿ

ಬೇಕಾಗುವ ಸಾಮಗ್ರಿಗಳು

- ಹಾಲಿನ ಪುಡಿ 50ಗ್ರಾಂ, ನೀರು ಅರ್ಧ ಲೀಟರ್
- ಜೋಳದಹಿಟ್ಟು 1 ಚಮಚ, ಖೋವಾ 50 ಗ್ರಾಂ, ಕೇಸರಿ 1 ಚಿಟಿಕೆ
- ಹತ್ತು ಬಾದಾಮಿ ಚೂರು, ಸಕ್ಕರೆ 75 ಗ್ರಾಂ, ಐಸ್ ಕ್ರೀಮ್ ಎರಡು ಕಪ್

ಮಾಡುವ ವಿಧಾನ

- ನೀರಿನೊಂದಿಗೆ ಹಾಲಿನ ಪುಡಿ ಬೆರೆಸಿ, ಸಕ್ಕರೆ ಕೇಸರಿ ಸೇರಿಸಿ ಹತ್ತು ನಿಮಿಷ ಕುದಿಸಿ, ಖೋವಾ ಮತ್ತು ಬಾದಾಮಿಯನ್ನು ಹಾಕಿ ಮತ್ತೆ ಹತ್ತು ನಿಮಿಷ ಕುದಿಸಿ. ಜೋಳದ ಹಿಟ್ಟನ್ನು ಮೂರು ಚಮಚ ನೀರಿನಲ್ಲಿ ಬೆರೆಸಿ, ಐಸ್ ಕ್ರೀಮ್ ಅನ್ನೂ ಮಿಶ್ರಣಕ್ಕೆ ಸೇರಿಸಿ ಮತ್ತೆ ಹತ್ತು ನಿಮಿಷ ಕುದಿಸಿ. ಒಲೆಯ ಮೇಲಿಂದ ಇಳಿಸಿ ತಣ್ಣಗಾಗಲು ಬಿಡಿ. ಅಗಲವಾದ ಪಾತ್ರೆಗೆ ಹಾಕಿ ಫ್ರಿಡ್ಜ್ ನಲ್ಲಿ ಅರ್ಧಗಂಟೆ ಇಟ್ಟು ಬೇಕಾದ ಅಕಾರಕ್ಕೆ ಕತ್ತರಿಸಿ ಕಡ್ಡಿ ಚುಚ್ಚಿಡಿ. ಮತ್ತೆ ಒಂದು ಗಂಟೆ ಫ್ರಿಡ್ಜ್ ನಲ್ಲಿಟ್ಟು ತಿನ್ನಲು ಕೊಡಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಕುತ್ತಿಗೆಗೆ ಹಾಕಿದರೆ ಬರುತ್ತೆ , ಇಲ್ಲದಿದ್ದರೆ ಇಲ್ಲ

೨. ತಂದವರೊಬ್ಬರು ! ಹಿಡಿದವರೊಬ್ಬರು ! ಹೊತ್ತವರೊಬ್ಬರು

ಉತ್ತರಕ್ಕೆ ಪುಟ ೧೪ ನೋಡಿ

ಹರಯ ...

ಅರಿಯಾಗಿದೆ ಹರಯ
ಉರಿಯಾಗಿದೆ
ಬರಿದಾಗದೆ ಒಡಲ
ಸೆರೆಯಾಗಿದೆ

ಗಿರಿಯಾಗಿದೆ ಹರಯ
ಮರೆಯಾಗದೆ
ನೆರೆಯಾಗಿದೆ ಕಡಲ
ನೊರೆಯಾಗಿದೆ

ಹೂವಾಗಿದೆ ಹರಯ
ಕಾಯಾಗಿದೆ
ಹಣ್ಣಾಗದೆ ಒಳಗೆ
ಹಾಯಾಗಿದೆ

ಹಸಿಯಾಗಿದೆ ಹರಯ
ಬಿಸಿಯಾಗಿದೆ
ಹುಸಿಯಾಗದೆ ವನದ
ಸಸಿಯಾಗಿದೆ

ಉಸಿರಾಗಿದೆ ಹರಯ
ಕೊಸರಾಗಿದೆ
ಕಸರಾಗದೆ ಮನದ
ಹೆಸರಾಗಿದೆ

ಕಾಡಾಗಿದೆ ಹರಯ
ಹಾಡಾಗಿದೆ
ಮಣ್ಣಾಗದೆ ಹೆಣ್ಣ

ಒಲವಾಗಿದೆ ಹರಯ
ಹುಯಿಲಾಗಿದೆ
ತಿಳಿಯಾಗದೆ ಬಣ್ಣ
ಬಯಲಾಗಿದೆ

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"


ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

1. ತನ್ನ ಹೆಸರಿನಿಂದಲೇ ಸಂತೋಷವನ್ನು ಹೆಚ್ಚಿಸುತ್ತಿದ್ದ ಉತ್ತರಭಾರತದ ದೊರೆ.

2. ಗಣೇಶ ತನ್ನ ಸೊಂಡಿಲಿನಲ್ಲೇ ಇರಿಸಿಕೊಂಡಿರುವ ಪ್ರಿಯವಾದ ತಿನಿಸು.

3. ರಘುವಂಶದಲ್ಲಿ ಜನಿಸಿದ್ದರಿಂದ ರಾಮನಿಗೆ ಈ ಹೆಸರು.

3. ಬಲು ಪುಟ್ಟದಾದರೂ ಅಂಬೆಯ ಪತಿಯ ಪೂಜೆಗೆ ತುಂಬಾ ಶ್ರೇಷ್ಠವಾದ ಹೂವಿದು.

4. ಅಮೃತ ಹೇಳಿದ ಸಂಸ್ಕೃತದ ಸುಳ್ಳು

5. ಜೇನು ಹೀರಲು ಹೂವಿಗೆ ಬಂದ ದುಂಬಿ ನಡೆಸಿದ ಮತ್ತೊಂದು ನೈಸರ್ಗಿಕ ಕ್ರಿಯೆ

ಉತ್ತರ :- ಕವಿಗಳಿಗೂ ಅರಸರಿಗೂ ಮಾರ್ಗದರ್ಶಿ ರಚಿಸಿದ ಕನ್ನಡನಾಡಿನ ಖ್ಯಾತ ದೊರೆ.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಜೂನ್ ೧೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಮೇ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ಕೆ. ಎಸ್ ನವೀನ್, ಮಧುಗಿರಿ
- ಸೌಮ್ಯ ಶ್ರೀನಾಥ್, ತುಮಕೂರು
- ವೀಣಾ ಕೌಶಿಕ್, ಸಿಡ್ನಿ
- ಮಹೇಶ್ ಎಚ್. ಸಿ

ಪದಪುಂಜ ಮೇ ೨೦೧೭

೧. ಆಳು ಮೇಯಿಸಿಕೊಂಡು ಬಂದು ಕೊಟ್ಟಿಗೆಯಲ್ಲಿ ಕಟ್ಟಿದ್ದು?

ಆ	ಕ	ಳು

೨. ಇದನ್ನು ನುಡಿಯದಿರುವುದೂ ಅಂತರಂಗ ಬಹಿರಂಗ ಶುದ್ಧಿಗಳಲ್ಲೊಂದು.

ಹು	ಸಿ

೩. ಶಿಕ್ಷೆಗೊಳಗಾದವರ ಮನೆ.

ಕಾ	ರಾ	ಗೃ	ಹ

೪. ನನಸಾಗುವ ಮೊದಲು ಆಗಬೇಕಾದ್ದು?

ಕ	ನ	ಸು

೫. ಓಲಗದೊಂದಿಗೆ ಬೀದಿಬೀದಿಗಳಲ್ಲಿ ಬರುತ್ತಿರುವುದೇನು?

ಮೆ	ರ	ವ	ಣಿ	ಗೆ

೬. ಈ ರಂಗ ನಾಟಕದ್ದಲ್ಲ. ಸಾವುನೋವಿನದು. ಸೋಲುಗೆಲುವಿನದು.

ರ	ಣ	ರಂ	ಗ

ಉತ್ತರ:

ಗೇರುಸೊಪ್ಪೆಯ ಚೆನ್ನಭೈರಾದೇವಿಗೆ ದೊರೆತ ಪಟ್ಟದಲ್ಲಿ ಸಾಂಭಾರ ಪದಾರ್ಥವೂ ಬೆರೆತಿತ್ತು.

ಕಾ	ಳು	ಮೆ	ಣ	ಸಿ	ನ	ರಾ	ಣಿ

ATTENTION INVESTORS

NEW HOMES AT BLAKES CROSSING
ONLY 31KM FROM ADELAIDE CBD

Turnkey investment packages
from under $299,000*

Deposit only $2,000*

BOOK AN APPOINTMENT WITH UMESH TODAY TO START YOUR INVESTMENT JOURNEY!

Call 0401 034 456
Email umesh.nagasandra@burbank.com.au

*Terms & conditions apply

Burbank
#noplacelikehome

ಜಾಣ ಕರ್ನಾಟಕ

೧. 'ಕಾಯೌ ಶ್ರೀಗೌರೀ ಕರುಣಾಲಹರಿ' ಈ ಗೀತೆಯ ಮಹತ್ವವೇನು? ಇದನ್ನು ರಚಿಸಿದವರು ಯಾರು?

೨. ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಮೈಸೂರು ರಾಜ್ಯದ ಅಧಿಕೃತ ಲಾಂಛನವೇನಾಗಿತ್ತು? ಈಗಿನ ಕರ್ನಾಟಕ ಸರ್ಕಾರದ ಲಾಂಛನವು ಏನು?

ಸರಿ ಉತ್ತರಕ್ಕೆ ಪುಟ ೧೬ ನೋಡಿ

ಒಗಟು - ಉತ್ತರ

೧. ಬಿಂದಿಗೆ ೨. ಬಳೆ

ಹಾಸ್ಯ ಚಿಲುಮೆ

ಅಪ್ಪ: ಲೋ ಗುಂಡ ಪರೀಕ್ಷೆ ಯಾಕೋ ಬರೀಲಿಲ್ಲ?

ಗುಂಡ:ಪೇಪರ್ ತುಂಬಾ ಟಫ್ ಆಗಿತ್ತು

ಅಪ್ಪ. ಅಪ್ಪ:ಪರೀಕ್ಷೆನೇ ಬರೀಲಿಲ್ಲ ಟಫ್ ಅಂತ ಅದು ಹೇಗೆ ಗೊತ್ತಾಯ್ತು?

ಗುಂಡ:ನೆನ್ನೇನೇ ಪೇಪರ್ ಲೀಕ್ ಆಗಿತ್ತು ಅಪ್ಪಾ...

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ - ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಶ್ರೀಮತಿ ದಿವ್ಯಶ್ರೀ ವಿಕ್ರಂ, ಬೆಂಗಳೂರು



ವಿದ್ವಾನ್ ವಿದ್ಯಾ ಭೂಷಣರ ಸುಮಧುರ ಕಂಠಸಿರಿಯಲ್ಲಿ ದಾಸರ ಪದಗಳನ್ನು ಕೇಳಿ ಆನಂದಿಸಿ

ನೀವು ಮಾಡಿ

ನಿಮ್ಮ ಮಾತನ್ನು ಕೇಳುವ ನೀರು ...

ಸಂಗ್ರಹ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ಒಣಗಿರುವ ಒಂದು ಬಾಚಣಿಗೆ
- ವಾಶ್ ಬೇಸಿನ್ ಬಳಿಯ ನಲ್ಲಿಯಲ್ಲಿ ಹರಿಯುವ ನೀರು

ವಿಧಾನ:

- ವಾಶ್ ಬೇಸಿನ್ ನಲ್ಲಿಯನ್ನು ಬಿಟ್ಟು, ಸಣ್ಣಗೆ ನೀರು ಹರಿಯುವಂತೆ ಮಾಡಿ
- ಬಾಚಣಿಗೆಯಿಂದ ನಿಮ್ಮ ತಲೆಯ ಕೂದಲನ್ನು ಎಂಟು-ಹತ್ತು ಸರ್ತಿ ಧೀರ್ಘವಾಗಿ ಬಾಚಿ
- ನಿಧಾನಕ್ಕೆ ಬಾಚಣಿಗೆಯನ್ನು ಹರಿಯುತ್ತಿರುವ ನಲ್ಲಿ ನೀರಿನ ಬಳಿ ತನ್ನಿ
- ಎಲ್ಲವೂ ಸರಿಯಾಗಿ ಮಾಡಿದರೆ, ಆ ನೀರಿನ ಹರಿವು ಬಾಚಣಿಗೆಯತ್ತ ವಾಲುತ್ತದೆ

ಏನಾಗುತ್ತಿದೆ:

ಕೂದಲನ್ನು ಬಾಚಿಕೊಂಡಾಗ, ಅದರಲ್ಲಿರುವ ಎಲೆಕ್ಟ್ರಾನ್ ಗಳು ಬಾಚಣಿಗೆಗೆ ವರ್ಗವಾಗುತ್ತವೆ. ಈ ಎಲೆಕ್ಟ್ರಾನ್ ಋಣಾತ್ಮಕ ವಿದ್ಯುದಾವೇಶವನ್ನು (ನೆಗೆಟಿವ್ ಚಾರ್ಜ್) ಹೊಂದಿರುತ್ತದೆ. ಆಯಸ್ಕಾಂತೀಯ ಸೆಳೆತದಂತೆ, ಇವು ಧನಾತ್ಮಕ (ಪಾಸಿಟಿವ್) ಅಂಶಗಳಿಂದ ಆಕರ್ಷಿಸಲ್ಪಡುತ್ತದವೆ. ನೀವು ನಲ್ಲಿ ಬಳಿ ಋಣಾತ್ಮಕ ಆವೇಶದ ಬಾಚಣಿಗೆ ತಂದಾಗ, ಇದು ನೀರಿನ ಧನಾತ್ಮಕ ಶಕ್ತಿಯಿಂದ ಆಕರ್ಷಿತವಾಗುತ್ತದೆ. ನೀರಿನ ಹರಿವು ಸಣ್ಣದಿರುವುದರಿಂದ ಆಕರ್ಷಣೆ ಸಾಧ್ಯವಾಗುತ್ತದೆ.

ಇದೇ ರೀತಿಯಲ್ಲಿ, ನೀವು ಸಣ್ಣಸಣ್ಣ ಕಾಗದ ತುಂಡುಗಳನ್ನು ಬಾಚಿದ ಬಾಚಣಿಗೆಯಿಂದ ಆಕರ್ಷಿಸಬಹುದು ▪

ಜಾಣ ಕರ್ನಾಟಕ – ಉತ್ತರ

೧. ಇದು ಮಹಾರಾಜರ ಆಳ್ವಿಕೆಯ ಕಾಲದಲ್ಲಿ ನಾಡಗೀತೆಯಾಗಿತ್ತು. ಇದನ್ನು ರಚಿಸಿದವರು ಶ್ರೀ ಬಸವಪ್ಪ ಶಾಸ್ತ್ರಿಗಳು.

೨. ಎರಡು ಲಾಂಛನವೂ ಒಂದೇ, ಗಂಡಭೇರುಂಡ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ದಾಸರ ಪದಗಳ ಸಂಗೀತ ಸುಧೆ

೧೫, ಜುಲೈ ೨೦೧೨, ೫:೩೦

Wattle Grove Public School, Cressbrook Drive, NSW 2173

Contact: Kanakapur Narayana on 0423634979

ಸಿಡ್ನಿ ದಸರಾ ಹಬ್ಬ

ನಿರೀಕ್ಷಿಸಿ

ಸೆಪ್ಟೆಂಬರ್ / ಅಕ್ಟೋಬರ್ ೨೦೧೨

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.